# ನುಡಿಗಳ ಅಳಿವು ಸಮುದಾಯಗಳ ಉಳಿವು

## ಯಾವುದನ್ನು ಕುರಿತು ನಾವು ಚಿಂತಿಸಬೇಕು?



ಮೇಟಿ ಮಲ್ಲಿಕಾರ್ಜುನ

2024ರ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೆ.ವಿ. ನಾರಾಯಣರ ಕೃತಿ 'ನುಡಿಗಳ ಅಳಿವು' ಕುರಿತು ವಿಶ್ಲೇಷಣಾತ್ಮಕ ಟಿಪ್ಪಣಿಗಳು.

1

'ನುಡಿಗಳ ಅಳಿವು: ಬೇರೆ ದಿಕ್ಕಿನ ನೋಟ' (2018) ಎಂಬ ಕೃತಿಯು ಕೆ.ವಿ. ನಾರಾಯಣ ಅವರ ನುಡಿ ಮತ್ತು ನುಡಿ ಸಮುದಾಯಗಳ ಬಗೆಗಿನ ವಿಶ್ಲೇಷಣಾತ್ಮಕ ಚಿಂತನೆಗಳನ್ನು ಒಳಗೊಂಡಿದೆ. ನುಡಿ ಅಳಿವನ್ನು ಕುರಿತು ಹಲವು ಆಯಾಮದ ಚರ್ಚೆ-ಸಂವಾದವನ್ನು ಇಲ್ಲಿ ಬೆಳೆಸಲಾಗಿದೆ. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು: ತಾತ್ವಿಕತೆಯ ನಿಲುವುಗಳು, ಒಪ್ಪಿತ ಮತ್ತು ಪರ್ಯಾಯ ಮಾದರಿಗಳ ಮುಖಾಮುಖಿ, ನುಡಿ ಅಳಿವಿನ ಬಗೆಗಿನ ಆತಂಕಗಳು, ಜೀವ ವೈವಿಧ್ಯ-ನುಡಿ ವೈವಿಧ್ಯಗಳ ನಡುವಣ ಗುಣಾತ್ಮಕ ವ್ಯತ್ಯಾಸಗಳು, ಬಹುತ್ವ, ಬಹುಳತೆಗಳ ನಿರ್ವಹಣೆಯ ಸವಾಲುಗಳು, ನುಡಿ ನೀತಿ ಮತ್ತು ಯೋಜನೆಗಳ ನಡುವಣ ವೈರುಧ್ಯಗಳು, ನುಡಿ ಸಮುದಾಯಗಳ ಗುರುತಿನ ಪ್ರಶ್ನೆ, ನುಡಿ ಅಳಿವು, ನುಡಿ ಪಲ್ಲಟ, ನುಡಿ ಕಾಪಿಡುವುದು ಮೊದಲಾದ ಅತ್ಯಂತ ಮಹತ್ವದ ಪ್ರಶ್ನೆಗಳನ್ನು ಪ್ರಸ್ತುತ ಪುಸ್ತಕದಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

ನುಡಿ ಅಳಿವಿನ ಬಗೆಗಿನ ಮಾಹಿತಿಯನ್ನು ಸಂಗ್ರಹಿಸಿ ಕೊಡುವುದು ಈ ಪುಸ್ತಿಕೆಯ ಉದ್ದೇಶವಲ್ಲ. ಬದಲಾಗಿ ನುಡಿ ಅಳಿವನ್ನು ಕುರಿತ ವಾಗ್ವಾದವನ್ನು ಬೆಳೆಸುವುದಾಗಿದೆ.